# ವಸಂತದಲ್ಲಿ ಪ್ರಾರ್ಥನೆ

ಅವು ದೈವಿಕ ಮಾಸದ ಆಗಮನದ ದಿನಗಳು. ಪ್ರಕೃತಿಯ ಗಿಡಮರಗಳೆಲ್ಲ ತಮ್ಮ ಹಳೆಯ ರೂಪವನ್ನು ಕಳೆದುಕೊಂಡು ಪರಿಮಳಿಸುವ ಚಿಗುರಿನ ಹೊಸ ಉಡುಗೆಗಳನ್ನು ತೊಟ್ಟು ಉಲ್ಲಾಸದಿಂದ ವಸಂತವನ್ನು ಎದುರುಗೊಳ್ಳಲು ಕಾದಿದ್ದವು. ಆದರೆ, ಒಂದು ಕಣ್ಣಿನಲ್ಲಿ ಓಕುಳಿಯ ಬಣ್ಣಗಳನ್ನು, ಇನ್ನೊಂದು ಕಣ್ಣಿನಲ್ಲಿ ವಸಂತ ಋತುವಿನ ಚೆಲುವನ್ನು ತುಂಬಿಕೊಂಡು ಸಂಭ್ರಮಿಸುವ ಸ್ಥಿತಿಯಲ್ಲಿ ಇಂದಿನ ಲೋಕದ ಮನಸ್ಸು ಇಲ್ಲ. ಯುದ್ಧದ ಕಾರ್ಮೋಡ ಎಲ್ಲೆಡೆ ಆವರಿಸಿಕೊಂಡಿದೆ. ಪರ್ವತಗಳು, ಕಡಲು, ಸಿಹಿನೀರು ಕೊಡುವವ ನದಿಗಳು ಎಲ್ಲವೂ ಕಡು ದುಃಖದಿಂದ ಮೌನವಾಗಿವೆ. ವಸಂತ ಋತುವಿನ ಸಮಯದಲ್ಲಿ ಕಾಣಿಸಿಕೊಳ್ಳುವ ಹಳದಿ, ಬಿಳಿ ಹೂವುಗಳೆಲ್ಲ ರಕ್ತದಿಂದ ತೋಯ್ದು ಶೋಕಭರಿತವಾಗಿವೆ. ಬಾಲ್ಯದ ತೋಟಗಳಲ್ಲಿ ಅರಳಿನಲಿಯ ಬೇಕಿದ್ದ ನಮ್ಮ ಹಸುಮಕ್ಕಳೆಲ್ಲ ಮಸಣದಲ್ಲಿ ಗೋರಿಯಾಗಿದ್ದಾರೆ. ಇನ್ನು ಈ ವಸಂತಋತು ಯಾರಿಗಾಗಿ ಹಾಡಬೇಕು! ಇಂತಹ ಎದೆಬಿರಿಯುವ ದಿನಗಳನ್ನು ನೋಡಿ ಲಕ್ನೋದಲ್ಲಿ ವಾಸವಿದ್ದ ದಭೀರ್ (1802–1874) ಎನ್ನುವ ಸೂಫಿ ಕವಿ ದುಃಖದಿಂದ ತೋಯ್ದ ಭಾಷೆಯಲ್ಲಿಯೇ ಹೇಳಿದ 'ಶರದೃತು ಹೋದ ನಂತರ ವಸಂತ ಋತು ಬರುತ್ತಿದೆ. ವೃಕ್ಷಗಳೂ ಚಿಗುರುತ್ತಿವೆ ಎಂದು ಜನರು ಅನ್ನುತ್ತಾರೆ. ಆದರೆ ನನ್ನ ತೋಟವು ಹಾಳಾಗಿದೆ. ವಸಂತ ಋತುವಿನ ಆಶೆಯೇ ಇಲ್ಲ...' ಸುಮಾರು 165 ಮುಗ್ಧ ಶಾಲಾ ಮಕ್ಕಳನ್ನು ನಿರ್ದಯವಾಗಿ ಕೊಂದ ಕೊಲೆಗಡುಕ ಕೈಗಳು ಇಲ್ಲಿರುವಾಗ ವಸಂತ ಋತುವಿಗೆ ಓಕುಳಿಯ ಬಣ್ಣ ತುಂಬಲು ಸಾಧ್ಯವೆ!

ಯುದ್ಧದ ಹುಟ್ಟು ಇರುವುದು ಮನುಷ್ಯನ ಸ್ವಾರ್ಥದಲ್ಲಿ. ಎಲ್ಲರ ತೋಟಗಳು ಹಾಳಾದರೂ ಸರಿಯೆ, ನನ್ನ ತೋಟ ಮಾತ್ರ ಸದಾ ಹಸುರಿನಿಂದ ತುಂಬಿರಬೇಕು ಎನ್ನುವ ಅವಿವೇಕದ ತಿಳಿವಳಿಕೆಯಲ್ಲಿ. ಅಂಕಿ ಅಂಶಗಳು ಹೇಳುವಂತೆ ಆಧುನಿಕ ಕಾಲದಲ್ಲಿ ಯುದ್ಧಕ್ಕೆ ಒಂದು ದಿನಕ್ಕೆ ತಗಲುವ ವೆಚ್ಚ ಸಾವಿರಾರು ಕೋಟಿ ರೂಪಾಯಿಗಳು. ಒಂದು ಯುದ್ಧ ಎಂಟು ದಿನ ನಡೆದರೆ, ಇದೇ ಹಣದಲ್ಲಿ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು 5 ವರ್ಷ ನಿರಾಯಾಸವಾಗಿ ಮುಂದುವರೆಸಬಹುದು! ತೆರಿಗೆದಾರರ ಆರೋಗ್ಯ, ವಸತಿ, ಶಿಕ್ಷಣ, ಉದ್ಯೋಗಕ್ಕಾಗಿ ವ್ಯಯವಾಗಬೇಕಿದ್ದ ಹಣ ಈಗ ಶಸ್ತ್ರಾಸ್ತ್ರಗಳನ್ನು ಕೊಳ್ಳಲು ಬಳಕೆಯಾಗುತ್ತಿದೆ. ರಾಜರು ಸ್ವಾರ್ಥ, ಪ್ರತಿಷ್ಠೆ, ಅನ್ಯ ದೇಶದವರ ಪ್ರಕೃತಿ ಸಂಪತ್ತಿನ ಮೇಲಿನ ದುರಾಸೆ, ನಿರಂಕುಶ ಅಧಿಕಾರದ ದಾಹ ಹೆಚ್ಚಾದಷ್ಟೂ ಜನಗಳ ಗೋಳು ಅಧಿಕವಾಗುತ್ತಾ ಹೋಗುತ್ತದೆ. ಇದರೊಂದಿಗೆ ಗುಪ್ತವಾಗಿ ಜನಾಂಗೀಯ ದ್ವೇಷವೂ ಅಡಗಿದೆ. ಇಂತಹ ಮತಿಹೀನರ ಅವಿವೇಕವನ್ನು ನೋಡಿಯೇ ಕುಮಾರವ್ಯಾಸ ಹೇಳಿದ: 'ಅರಸು ರಾಕ್ಷಸ ಮಂತ್ರಿಯೆಂಬುವ / ಮೊರೆವ ಹುಲಿ ಪರಿವಾರ ಹದ್ದಿನ / ನೆರವಿ ಬಡವರ ಬಿನ್ನಪವನಿನ್ನಾರು ಕೇಳುವರು...'

ಚರಿತ್ರೆಯಲ್ಲಿ ಯುದ್ಧದ ವಿನಾಶದಿಂದ ಪಾಠ ಕಲಿತವನೆಂದರೆ ಅಶೋಕ ಚಕ್ರವರ್ತಿ ಮಾತ್ರ. 'ಅವಿಭಜಿತವಾದ ಒಂದು ದೇಶವನ್ನು ಜಯಿಸುವಾಗ ಅಲ್ಲಿ ಸೆರೆಯೂ, ವಧೆಯೂ ಮರಣವೂ ನಡೆಯುವುದು ಸಹಜ' ಎಂಬುದು ಅಶೋಕನಿಗೂ ಗೊತ್ತಿತ್ತು. ಒಂದು ಶಾಸನದಲ್ಲಿ ಯುದ್ಧದಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಹೀಗೆ ಹೇಳಿದ್ದಾನೆ: 'ಅಂದು ಒಂದೂವರೆ ಶತಸಹಸ್ರ ಜನರನ್ನು ಅಲ್ಲಿಂದ ಸೆರೆಹಿಡಿದು ಸಾಗಿಸಲಾಯಿತು. ಶತಸಹಸ್ರ ಜನರು ಅಲ್ಲಿ ಹತರಾದರು. ಅದಕ್ಕಿಂತ ಬಹುಮಂದಿ ಮೃತರಾದರು. ದೂರದಲ್ಲಿ ತಮ್ಮ ತಮ್ಮ ಕೆಲಸ ಕಾರ್ಯಗಳಲ್ಲಿ ತಮ್ಮಷ್ಟಕ್ಕೆ ತಾವು ಸ್ವಸ್ಥರಾಗಿದ್ದ ಜನರಿಗೂ ಯುದ್ಧದ ಬೇಗೆ ತಟ್ಟಿಯೇ ತಟ್ಟುತ್ತದೆ. ತಮ್ಮ ಆಪ್ತೇಷ್ಟರು, ಬಂಧುಗಳು, ಸ್ನೇಹಿತರು ಇವರಲ್ಲನೇಕರು ಸಾವು ನೋವುಗಳಿಗೆ ಈಡಾಗಿದ್ದಾರೆಂಬ ಸುದ್ದಿ ತಿಳಿದಾಗ ಅವರಿಗಾಗುವ ವ್ಯಥೆ ಅಷ್ಟಿಷ್ಟೆ! ಅಂದಿನ ಹತ್ಯಾಕಾಂಡದ ಸಾವಿರದೊಂದು ಪಾಲು ನೋವು ಉಂಟಾದರೂ ನನಗೆ ದುಃಖವಾಗುತ್ತದೆ'. ಎಂದು ಹೇಳಿ ಕಿರೀಟ ಮತ್ತು ಖಡ್ಗಗಳನ್ನು ಕೆಳಗಿಳಿಸಿ ಬೌದ್ಧ ಧರ್ಮವನ್ನು ಸ್ವೀಕರಿಸಿದ. ಯುದ್ಧದಲ್ಲಿ ಜಯಿಸಿದವರಿಗೂ ಕೇಡು; ಸೋತವರಿಗೂ ಕೇಡು ಎಂಬ ಸತ್ಯ ಅವನಿಗೆ ಮನದಟ್ಟಾಯಿತು. ನೆರೆಹೊರೆಯವರನ್ನು ನೆಮ್ಮದಿ, ಸಂತೋಷದಿಂದ ಇರಲು ಬಿಡುವ ಭಾವನೆಯೇ ಎಲ್ಲಕ್ಕಿಂತ ಪರಿಶುದ್ಧ ಭಾವನೆಯಲ್ಲವೆ!

ಕುವೆಂಪು ಅವರ 'ಶ್ಮಶಾನ ಕುರುಕ್ಷೇತ್ರಂ' ನಾಟಕದ ಒಂದು ದೃಶ್ಯ ಯುದ್ಧಗಳ ನಿಜಸ್ವರೂಪವನ್ನು ತೆರೆದಿಡುತ್ತದೆ. ಕುರುಕ್ಷೇತ್ರದ ಅದೀಗ ಶ್ಮಶಾನ ಕುರುಕ್ಷೇತ್ರವಾಗಿದೆ. ಅಲ್ಲಿಗೆ ಒಬ್ಬ ಮುದುಕಿ ತನ್ನ ಮಗನನ್ನು ಹುಡುಕುತ್ತಾ ಬರುತ್ತಾಳೆ. 'ಶ್ರೀಮಂತರ ಕಲಹಾಗ್ನಿಗೆ ಯಜ್ಞಪಶುಗಳು ನಮ್ಮಂತಹ ದರಿದ್ರರಲ್ತೆ?' ಎನ್ನುತ್ತಾ ಬಸವಳಿದು ತಲೆಯ ಮೇಲೆ ಕೈ ಹೊತ್ತು ಕುಳಿತುಕೊಳ್ಳುತ್ತಾಳೆ. ಅದೇ ಹೊತ್ತಿಗೆ ಅಲ್ಲಿ ಒಬ್ಬ ತಾಯಿ ಕಂದನ ಕೈಹಿಡಿದುಕೊಂಡು ಹೆಬ್ಬಯಲಿನ ಹೆಣಗಳ ಬಣವೆಯೊಳಗೆ ತನ್ನ ಗಂಡನ ಶವವನ್ನು ಹುಡುಕುತ್ತಾ ಬರುತ್ತಾಳೆ. ಮುದುಕಿ 'ನಿನ್ನ ಗಂಡ ಯಾರ ಪಕ್ಷದವ?' ಎಂದು ಕೇಳಿದಾಗ, ಆ ತಾಯಿ 'ಪಾಂಡವರ ಪಕ್ಷದವನು. ನಿನ್ನ ಪುತ್ರ?' ಎಂದು ಕೇಳುತ್ತಾಳೆ. ಮುದುಕಿ 'ಕೌರವನ ಪಕ್ಷ' ಎನ್ನುತ್ತಾಳೆ. ತಾಯಿ 'ನಿನ್ನ ಮಗನೆನ್ನ ಪತಿಗೆ ಹಗೆಯಾಗಿದ್ದನೇನು?' ಮುದುಕಿ 'ಅರಿಗಾರು ಹಗೆ? ನಿನಗೆ ನಾನು ಹಗೆಯೇ?' 'ನಮ್ಮ ಬಡಜನರೆಲ್ಲ ಮಂಕುಗಳಮ್ಮಾ. ಪಾಂಡವರು ಕೌರವರು ತಮ್ಮ ರಾಜ್ಯಕ್ಕಾಗಿ ಹೋರಾಡಿದರೆ, ನಮ್ಮ ಮಕ್ಕಳು ಪರಸ್ಪರ ಬಡಿದಾಡಿ ಮಡಿಯುವರು. ನನ್ನ ಮಗನಿಗೆ ನಿನ್ನ ಪತಿಯ ಮೇಲೆ ಹಗೆತನವುಂಟೆ? ನಾವೀರ್ವರೂ ದುಃಖಾರ್ತರು. ನಡೆ ನಮ್ಮವರ ಶವಗಳನ್ನು ಹುಡುಕೋಣ. ಎಂದು ಮುಂದಾಗುತ್ತಾರೆ. ಜರ್ಮನ್ ಕತೆಗಾರನೊಬ್ಬ ಹೇಳಿದ 'ಸಮರದಲ್ಲಿ ತಂದೆಯರೆಲ್ಲಾ ಯೋಧರು'. ಯುದ್ಧದ ಭೀಕರತೆಯನ್ನು ಕಣ್ಣಿಗೆ ಕಟ್ಟುವಂತೆ ಹೇಳುವ ಈ ನಾಟಕದ ಪರಿಣಾಮಕಾರಿ ಭಾಗವಿದು.

ಆದರೂ ಮನುಕುಲ ಇದರಿಂದ ಪಾಠ ಕಲಿಯಲಾರದು! ತುಘಲಕ್ ನಾಟಕದಲ್ಲಿ ಅಝೀಝು ಹೇಳುವ ಮಾತೊಂದು ಹೀಗಿದೆ: 'ಬುದ್ಧಿವಂತರಿಗಾಗಿ ಇರಬೇಕಾಗಿದ್ದ ಜಗತ್ತು, ಆದರೆ ಮೂರ್ಖರಿಂದ ತುಂಬಿದೆ' ನಿಜ. ಈ ವಸಂತದ ನಡುವೆಯೂ ನಮಗೀಗ ಉಳಿದಿರುವುದು ಪ್ರಾರ್ಥನೆಯೊಂದೆ 'ಓ ಪೊಲ್ಲ ಯುದ್ಧಮೇ / ಎಂದು ನಿಲ್ವಯ್ / ಓ ತಾಯೆ ಶಾಂತಿಯೇ / ಎಂದು ಗೆಲ್ವಯ್'

■ **ಜೆ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಕೆಲಸವಿಲ್ಲದೆ ಕ್ಷಣ ಕಳೆದರೂ ಅದು ಕಳ್ಳತನ ಮಾಡಿದಂತೆ.

  —ಗಾಂಧೀಜಿ
- ಒಳ್ಳೆಯತನದಿಂದ ಮತ್ತು ಸತ್ಯದ ಮಾರ್ಗದಲ್ಲಿ ನಡೆಯುವವರನ್ನು ಸುಲಭವಾಗಿ ಹೆದರಿಸಲು ಸಾಧ್ಯವಿಲ್ಲ.

  —ಶೇಕ್ಸ್‌ಪಿಯರ್
- ನೀವು ಎಲ್ಲರಿಂದ ದೂರಾಗಿ ಒಬ್ಬಂಟಿಗರಾಗಿದ್ದರೆ, ನಿಮ್ಮ ಪಾಪದ ಕೃತ್ಯಗಳಿಂದ ಸಂಕಟ ಪಡಬೇಕಾಗುತ್ತದೆ.

  —ಸಂತ ಕಬೀರ್
- ನಿಮ್ಮ ಮನಸ್ಸು ಪರಿಶುದ್ಧವಾಗಿದ್ದರೆ ಸಂತೋಷ ನೆರಳಿನಂತೆ ನಿಮ್ಮನ್ನು ಹಿಂಬಾಲಿಸಲಿದೆ.

  —ಬುದ್ಧ
- ಯಾವುದಕ್ಕೂ ಅಂಜದಿರಿ; ಅದ್ಭುತ ಕಾರ್ಯವನ್ನೆಸಗುವೆ. ಭೀತಿಯೇ ಪ್ರಪಂಚದ ಎಲ್ಲ ದುಃಖಗಳಿಗೂ ಮಹತ್ಕಾರಣ. ನಮ್ಮ ದುರವಸ್ಥೆಗಳಿಗೆಲ್ಲ ಭೀತಿಯೇ ಕಾರಣ.

  —ಸ್ವಾಮಿ ವಿವೇಕಾನಂದ
- ಪ್ರೀತಿಯಲ್ಲಿ ಬೀಳುವುದಕ್ಕೆ ಗುರುತ್ವಾಕರ್ಷಣ ಶಕ್ತಿಯನ್ನು ಬೈದು ಪ್ರಯೋಜನವಿಲ್ಲ. ಅದೊಂದು ಜೈವಿಕ ಕ್ರಿಯೆ; ಭೌತ ಮತ್ತು ರಸಾಯನಶಾಸ್ತ್ರಕ್ಕೆ ಅಲ್ಲಿ ಸ್ಥಳವಿಲ್ಲ.

  —ಆಲ್ಬರ್ಟ್ ಐನ್ ಸ್ಟೀನ್
- ನಮ್ಮ ಪಕ್ಕದ ಮನೆಯವರು ಸಜ್ಜನರಾಗಿದ್ದರೆ ನಮ್ಮ ಮನೆಯ ಬೆಲೆಯೂ ದುಪ್ಪಟ್ಟು ಆಗುತ್ತದೆ.

  —ವಿನೋಬಾ ಭಾವೆ
- ದೇವರನ್ನು ಪೂಜಿಸಿದರೆ ದೇವರಾಗುತ್ತೇವೆ, ದೆವ್ವಗಳನ್ನು ಪೂಜಿಸಿದರೆ ದೆವ್ವಗಳಾಗುತ್ತೇವೆ ಅಷ್ಟೇ.

  —ಕುವೆಂಪು